**<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ</u>**

**ಸಿ.ಸಿ ಃ 1 / 2022**

**ಸಿ.ಡಬ್ಲ್ಯೂ - 02**

**ಪಿ.ಡಬ್ಲ್ಯೂ - 02**

**ಸಾಕ್ಷಿದಾರರ ಹೆಸರು ಃ ಮುರಳಿಧರ**

**ತಂದೆಯ ಹೆಸರು ಃ ಸಂಜೀವ ಎಸ್**

**ವಯಸ್ಸು ಃ 51 ವರ್ಷ**

**ಉದ್ಯೋಗ ಃ ಕ್ಯಾಟರಿಂಗ್**

**ವಾಸಸ್ಥಳ ಃ ಶೃಂಗೇರಿ**

**ದಿನಾಂಕಃ 14.06.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

**<u>ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ</u>**

ದಿಃ 03/12/2020 ರಂದು ಶಾರದಾ ನಗರದ ಚೌಡೇಶ್ವರಿ ದೇವಸ್ಥಾನದ ಬಳಿ ಸರ್ವೆ ನಂಬರ್ 215 ರಲ್ಲಿ ಸರ್ಕಾರಿ ಜಾಗದಲ್ಲಿ ಮಣ್ಣು ಅಗೆದಿದ್ದಾರೆ ಎನ್ನುವ ವಿಷಯಕ್ಕೆ ಸಂಬಂಧಿಸಿ ಪೋಲಿಸರು ಚಾಸಾ 1 ರವರು ತೋರಿಸಿರುವ ಸ್ಥಳದಲ್ಲಿ ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಬೆಳಗ್ಗೆ 10 ರಿಂದ 11 ಗಂಟೆ ವರೆಗೆ ಪೋಲಿಸರು ಮಹಜರ್ ಕ್ರಮ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ಸಮಯದಲ್ಲಿ ಪೋಟೋ ತೆಗೆದಿರುತ್ತಾರೆ. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ 2 ಎಂದು, ಸಾಕ್ಷಿಯ ಸಹಿ 2-ಬಿ ಎಂದು, ಸಾಕ್ಷಿಯು ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿರುತ್ತದೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಐ ಎಸ್ ಟಿ ವಕೀಲರಿಂದ ಃ</u>**

ಚಾಸಾ 3 ನನ್ನ ಜೊತೆ ಕೆಲಸ ಮಾಡುತ್ತಾರೆ ಎಂದರೆ ಸರಿ. ವಕೀಲರ ಕಾರ್ಯಕ್ರಮಗಳಿಗೆ ನಾನು ಕ್ಯಾಟರಿಂಗ್ ಮಾಡುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹಣ ಪಡೆದು ಕ್ಯಾಟರಿಂಗ್ ಮಾಡುತ್ತೇನೆಂದು ನುಡಿದಿರುತ್ತಾರೆ. ಪೋಲಿಸರು ಮಹಜರ್ ಗಾಗಿ ನನಗೆ ಮುಂಚಿತವಾಗಿ ನೋಟಿಸ್ ಕೊಟ್ಟಿರುತ್ತಾರೆ. ಪೋಲಿಸರು ಮುಂಚಿತವಾಗಿ ನೋಟಿಸ್

ಕೊಟ್ಟಿರುವ ದಿನಾಂಕ ಈಗ ನನಗೆ ನೆನಪಿಲ್ಲ. ಮಣ್ಣು ಅಗೆಯುವ ವಿಷಯವನ್ನು ಬಿಟ್ಟು ಮಹಜರ್ ನಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಮಹಜರ್ ನಲ್ಲಿ ಮಣ್ಣು ಅಗೆದಲ್ಲಿ ಅನಾಹುತ ಆಗುತ್ತದೆ ಹಾಗೂ ಚಿಕ್ಕಮಗಳೂರು ಜಿಲ್ಲಾ ಕಚೇರಿಯಿಂದ ಚಾಸಾ 1 ರವರಿಗೆ ದೂರು ಬಂದಿರುತ್ತದೆ ಎಂದು ನಿಪಿ 2 ರಲ್ಲಿ ನಮೂದಾಗಿರುತ್ತದೆ ಎಂದು ನುಡಿದಿರುತ್ತಾರೆ. ಈ ರೀತಿ ಯಾವುದೇ ನಮೂದು ನಿಪಿ 2 ರಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳದಂತ ಸಮಯದಲ್ಲಿ ಮತ್ತು ಸ್ಥಳದಲ್ಲಿ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿಕೊಂಡು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಃಮರುವಿಚಾರಣೆ ಇಲ್ಲಃ**

**(ದಿನಾಂಕಃ 14.06.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

Sd/-
**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**